SERVICE ABOVE SELF




Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 | ಸಂಚಿಕೆ –26 | ದಿನಾಂಕ : 07–01–2026

**ದಿನಾಂಕ: 07.01.2026 ರಂದು ಬುಧವಾರ ನಮ್ಮ ಕ್ಯಾಲೆಂಡರ್ ವರ್ಷದ ಮೊದಲ ಸಭೆ. ಅಲ್ಲದೇ ರೋಟರಿಯು ವಿಶ್ವದಾದ್ಯಂತ ಜನವರಿ ತಿಂಗಳನ್ನು ವೃತ್ತಿ ಸೇವಾ ಮಾಸವನ್ನಾಗಿ ಗುರುತಿಸಿ ಆಚರಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರುಗಳಾದ ರೊ.ಸೆಂಥಿಲ್ ವೇಲನ್ ಮತ್ತು ರೊ. ಹೆಚ್.ಎಸ್. ಮೋಹನ್‌ರವರು ತಮ್ಮ ವೃತ್ತಿಯ ಕುರಿತು ತಮ್ಮ ಅನುಭವದ ಮಾತುಗಳನ್ನಾಡಿದರು. ಜೊತೆಗೆ ಆಶಾಕಿರಣ ಶಾಲೆಯ ಆವರಣದಲ್ಲಿ ಆಶಾಕಿರಣ ಶಾಲೆಯು ವತಿಯಿಂದ ನಡೆಸುತ್ತಿರುವ ASHAKIRANA TEACHER TRAINING INSTITUTE FOR SPECIAL EDUCATION ಸಂಸ್ಥೆಯಲ್ಲಿ ತರಬೇತಿ ಪಡೆದು ಪರೀಕ್ಷೆಯನ್ನು ಎದುರಿಸಿ ಉತ್ತಮವಾದ ಫಲಿತಾಂಶವನ್ನು ಹಾಗೂ ರ್‍ಯಾಂಕ್‌ಗಳನ್ನು ತಂದುಕೊಟ್ಟಿರುವ ವಿದ್ಯಾರ್ಥಿಗಳಿಗೆ ಸನ್ಮಾನ ಮತ್ತು ಅಭಿನಂದನಾ ಕಾರ್ಯಕ್ರಮವು ಏರ್ಪಾಡಾಗಿತ್ತು. ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಆರ್.ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ ಮತ್ತು ನಮ್ಮ ಸಂಸ್ಥೆಯ ಮಾಜಿ ಅಧ್ಯಕ್ಷರೂ ರೋಟರಿ 75 ನೇ ವಾರ್ಷಿಕ ದತ್ತಿನಿಧಿಯ ಚೇರ್ಮನ್‌ರಾದ ರೊ.ಡಿ.ಎಸ್. ನಟರಾಜ್‌ರವರು ಉಪಸ್ಥಿತರಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ್ದ ವಿದ್ಯಾರ್ಥಿಗಳು ಪುರಸ್ಕಾರ ಪಡೆದು ಸಂಭ್ರಮಿಸಿದರು. ಸಾರ್ಜೆಂಟ್ ರೊ.ಎಸ್. ಮಂಜುನಾಥ್‌ರವರು ಅಧ್ಯಕ್ಷರಿಗೆ ಕಾಲರ್ ತೊಡಿಸುವುದರ ಮೂಲಕ ಸಭೆಗೆ ಚಾಲನೆ ನೀಡಿದರು.**

ಶ್ರೀಮತಿ ಸಂಗೀತಾ, ಶ್ರೀಮತಿ ಸವಿತಾ ಸಂಗಡಿಗರು "ಗಜಮುಖನೆ ಗಣಪತಿಯೆ ನಿನಗೆ ವಂದನೆ" ಎಂಬ ಗೀತೆಯನ್ನು ಹಾಡಿ ಪ್ರಾರ್ಥನೆ ಮಾಡಿದರು. ರೊ. ಎನ್.ವಿ.ಭಟ್‌ರವರು ಸರ್ವರನ್ನು ಸ್ವಾಗತಿಸಿದರು. ವರದಿ ಹಾಗೂ ಹುಟ್ಟು ಹಬ್ಬದ ಶುಭಾಶಯಗಳನ್ನು ಅಧ್ಯಕ್ಷರಾದ ಆನಂದ್‌ರವರು ನೀಡಿದರು. ನಮ್ಮ ಕ್ಲಬ್‌ನ ಹಾಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಹುಟ್ಟು ಹಬ್ಬ ಆಚರಿಸಿಕೊಂಡಿದ್ದು, ಅವರನ್ನು ರೊ.ಆರ್.ಆನಂದ್‌ರವರು ಹಾಗೂ ರೊ.ಡಿ.ಎಸ್. ನಟರಾಜ್‌ರವರು ನೆನಪಿನ ಕಾಣಿಕೆನೀಡಿ ಶುಭ ಹಾರೈಸಿದರು. ಅಲ್ಲದೇ ನೆರೆದಿದ್ದ ಎಲ್ಲರೂ ಒಕ್ಕೊರಲಿನಿಂದ ಹಾಪಿ ಬರ್ತ್‌ಡೆ ಟು ಯೂ ಹಾಡನ್ನು ಹಾಡಿ ರೊ.ವಿಶ್ವಾಸ್ ಎಲಬುರ್ಗಿ ಯವರಿಗೆ ಶುಭ ಕೋರಿದರು.






ವೇದಿಕೆಯಲ್ಲಿದ್ದ ರೊ. ಡಿ.ಎಸ್.ನಟರಾಜ್‌ರವರು 75 ನೇ ವಾರ್ಷಿಕ ದತ್ತಿನಿಧಿಯ ಮಹತ್ವವನ್ನು ತಿಳಿಸುತ್ತಾ, ರೋಟರಿಯು 1905 ರಂದು ಅಮೇರಿಕಾದಲ್ಲಿ ಹುಟ್ಟಿ, ವಿಶ್ವದಾದ್ಯಂತ 75 ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ರಚನೆಗೊಂಡ ಈ ಟ್ರಸ್ಟ್, ಸಮುದಾಯಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ದಿಸೆಯಲ್ಲಿ, ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯನ್ನು 1980ರಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಿಕೊಂಡು ಬಂದದ್ದನ್ನು ತಿಳಿಸುತ್ತಾ ಅದು ನಡೆದು ಬಂದ ದಾರಿ ಹಾಗೂ ಅದರ ಬೆಳವಣಿಗೆಯಲ್ಲಿ ಪಾಲ್ಗೊಂಡ ರೊ.ಪಿಡಿಜಿ. ಡಾ.ಪಿ.ನಾರಾಯಣ, ರೊ. ಡಾ. ಅಶೋಕ್ ಪೈ, ರೊ.ಡಾ.ರಜನಿ ಪೈ, ಮುಂತಾದವರ ಪರಿಶ್ರಮ, ಡಾ, ಕೃಷ್ಣಮೂರ್ತಿ ಯವರಿಂದ ಭೂಮಿಯ ದೇಣಿಗೆ ನೀಡುವಿಕೆ ಹಾಗೂ ಹಲವಾರು

## ಈ ವಾರದ ಸಭೆ

**ದಿನಾಂಕ: 14–01–2026, ಬುಧವಾರ** **ಸಂಜೆ 6:45 ಗಂಟೆಗೆ**

**ಅತಿಥಿ:**

**ಶ್ರೀ ವೈದ್ಯನಾಥ ಹೆಚ್.ಯು.**

ಅಧ್ಯಕ್ಷರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ
ಶಿವಮೊಗ್ಗ ಜಿಲ್ಲಾ ಶಾಖೆ

**ವಿಷಯ:**

**'ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಜವಾಬ್ದಾರಿ'**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

























ಹಳೆಯ ರೋಟರಿ ಬಂಧುಗಳ ಶ್ರಮದಿಂದ ಈವರೆವಿಗೂ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಡಾ. ಅಶೋಕ್ ಪೈರವರ ಕನಸಿನ ಕೂಸಾದ ಈ ಶಿಕ್ಷಕರ ತರಬೇತಿ ಕೇಂದ್ರದಿಂದ ಈವರೆವಿಗೆ 13 ಬ್ಯಾಚ್‌ಗಳು ತರಬೇತಿ ಪಡೆದು ಹೋಗಿದ್ದಾರೆ. 14 ನೇ ಬ್ಯಾಚ್ ಪ್ರಾರಂಭವಾಗಬೇಕು. 13 ನೇ ಬ್ಯಾಚ್‌ಗಳ ಪರೀಕ್ಷೆ ನಡೆದು 3 ರ್‍ಯಾಂಕ್‌ಗಳು, 7 ಡಿಸ್ಟಿಂಕ್ಷನ್‌ಗಳು ಮತ್ತು 9 ಮೊದಲ ದರ್ಜೆ ಫಲಿತಾಂಶಗಳು ಬಂದಿದ್ದು, ಅಂದಿನ ಸಭೆಯಲ್ಲಿ ಅವರೆಲ್ಲರನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು. ರ್‍ಯಾಂಕ್ ಬಂದವರಿಗೆ ವಿಶೇಷವಾಗಿ ಶಾಲುಹೊದಿಸಿ, ನೆನಪಿನ ಕಾಣಿಕೆ, ಮೆಡಲ್‌ಗಳೊಂದಿಗೆ ಸನ್ಮಾನಿಸಲಾಯಿತು. ಉಳಿದವರಿಗೆ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ಮೆಡಲುಗಳನ್ನು ನೀಡಿ ಗೌರವಿಸಲಾಯಿತು. ಪ್ರತಿಯೊಬ್ಬರಿಗೂ ರೂ.2,000/- ಮೊತ್ತದ ನಗದು ಪುರಸ್ಕಾರ ನೀಡಲಾಯಿತು.

ಟ್ರಸ್ಟಿಗಳಾದ ರೊ.ಡಿ.ಎಸ್. ನಟರಾಜ್, ರೊ.ಡಾ.ರಜನಿ ಪೈ, ರೊ.ಕಿಶೋರ್ ಶೀರನಾಳಿ, ರೊ.ಕೆ.ಉಮೇಶ್ ಶಣೈ, ರೊ.ವೈ.ಜಿ. ಗುಪ್ತ, ರೊ.ಸಿ.ಬಿ.ವೀರಣ್ಣ, ರೊ. ವೀರಣ್ಣ ಎ. ಹುಗ್ಗಿ, ರೊ. ವೈ.ವಿ.ವಿ. ಜೋಯ್ಸ್, ರೊ. ಚಂದ್ರಪ್ಪ, ಆಶಾಕಿರಣ ಶಾಲೆಯ ಗೌರವ ಪ್ರಾಂಶುಪಾಲರಾದ ರೊ. ಎ.ಮಂಜುನಾಥ್, ರೊ.ಹೆಚ್.ಎಸ್. ಮೋಹನ್, ರೊ. ಸೆಂಥಿಲ್‌ವೇಲನ್, ರೊ.ಶೈಲಿನ್‌ರವರುಗಳು ಎಲ್ಲಾ ವಿದ್ಯಾರ್ಥಿಗಳ ಅಭಿನಂದನೆಯಲ್ಲಿ ಪಾಲ್ಗೊಂಡರು. ತಮ್ಮ ವೃತ್ತಿ ಜೀವನದ ಅನುಭವಗಳ ಬಗ್ಗೆ ರೊ.ಸೆಂಥಿಲ್ ವೇಲನ್ ಮತ್ತು ರೊ. ಹೆಚ್.ಎಸ್. ಮೋಹನ್‌ರವರುಗಳು ಮಾತನಾಡಿದರು.

ರೊ. ಸೆಂಥಿಲ್ ವೇಲನ್ ಮಾತನಾಡುತ್ತಾ, ಚಿನ್ನ ಯಾರಿಗೆ ಬೇಡ, ಎಲ್ಲರಿಗೂ ಇಷ್ಟವಾಗುವ ವಸ್ತುವೇ ಚಿನ್ನ. ಅದು ಹೆಚ್ಚು ಬೆಲೆ ಬಾಳುವಂಥಹದ್ದು. ಚಿನ್ನ ಭಾರತೀಯ ಪರಂಪರೆಯಲ್ಲಿ ಬೆಳೆದು ಬಂದಿದೆ. ಚಿನ್ನವನ್ನು ಪಡೆಯಲು ಗಣಿಗಳಲ್ಲಿ ಕಾರ್ಮಿಕರು ಪಡುವ ಕಷ್ಟಗಳ ಬಗ್ಗೆ ಮಾತನಾಡಿದ ರೊ. ಸೆಂಥಿಲ್‌ರವರು, ಒಂದು ಲೋಡ್ ಮಣ್ಣಿನಲ್ಲಿ ಕೇವಲ 1 ಗ್ರಾಂ 500 ಮಿಲಿ ದೊರಕುತ್ತದೆ. ಮಣ್ಣನ್ನು ಬಹು ಆಳದಲ್ಲಿ ಅಗೆಯಬೇಕು. ಅದನ್ನು ಸಂಸ್ಕರಿಸುವ ವೆಚ್ಚವೇ ಅಧಿಕವಾಗಿದೆ. ನೋಟುಗಳನ್ನು ಆಯಾ ದೇಶಗಳ ಕರೆನ್ಸಿಯೊಂದಿಗೆ ಬದಲಾಯಿಸಿಕೊಂಡು ವ್ಯವಹರಿಸಬಹುದು. ಆದರೆ ಚಿನ್ನವನ್ನು ವಿಶ್ವದಾದ್ಯಂತ ಎಲ್ಲಿ ಬೇಕಾದರೂ ಮಾರಬಹುದಾಗಿದೆ ಎಂದರು. ರಾಷ್ಟ್ರಗಳ ನಡುವೆಯುದ್ದದಂತಹ ಪ್ರಕ್ಷುಬ್ದ ವಾತಾವರಣಗಳಿಂದ ಚಿನ್ನದ ಬೆಲೆಯಲ್ಲಿ ಏರು ಮುಖವಾಗಿದೆ ಎನ್ನುತ್ತಾ ಚಿನ್ನದ ವಹಿವಾಟಿನ ಕೆಲವೊಂದು ಅಂಕಿ ಅಂಶಗಳನ್ನು ತಿಳಿಸಿದ ಅವರು, ಪ್ರಪಂಚದಲ್ಲಿ ಚಿನ್ನದ ರಿಸರ್ವನಲ್ಲಿ ಅಮೇರಿಕಾದ್ದು ಸಿಂಹಪಾಲು, 8000 ಟನ್‌ಚಿನ್ನವಿದೆ. ಭಾರತದ್ದು 800 ಟನ್‌ಚಿನ್ನವಿದೆ. ಆದರೆ ಭಾರತದಲ್ಲಿ ಮಹಿಳೆಯರೊಂದಿಗೆ ಸುಮಾರು 30000 ಟನ್‌ನಷ್ಟು ಚಿನ್ನವಿದೆ ಎಂದರು. ಕರ್ನಾಟಕದಲ್ಲಿ ವರ್ಷಕ್ಕೆ 1.5 ಟನ್ ಚಿನ್ನ

ಉತ್ಪಾದನೆಯಾದರೆ, ಅಕ್ಷಯ ತೃತೀಯದ ದಿನ 1 ಟನ್ ಚಿನ್ನ ವ್ಯಾಪಾರವಾಗುತ್ತದೆ ಎಂದರು. ಚಿನ್ನ ಅಣ್ಣ, ಬೆಳ್ಳಿ ತಮ್ಮ ಎನ್ನುವಂತಿದ್ದು, ಬೆಳ್ಳಿಯ ದರವೂ ಏರುತ್ತಲಿದೆ. ಚಿನ್ನ ಬೆಳ್ಳಿ ಆಭರಣಗಳು ನಮ್ಮ ದೇಶದ ಪರಂಪರೆಯಂತೆ ಪೂಜಾ ಸಂದರ್ಭಗಳಲ್ಲಿ ಬಳಕೆಯಾಗುತ್ತದೆ ಎಂದರು.

ರೊ. ಹೆಚ್.ಎಸ್. ಮೋಹನ್‌ರವರು Renewable Energy and Green Energy ಬಗ್ಗೆ ಮಾತನಾಡಿದರು. ಈ ಯೋಜನೆ ಪರಿಸರ ರಕ್ಷಿಸುವಲ್ಲಿ ಮತ್ತು ಇಂಗಾಲದ ಅಂಶವನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡುತ್ತಿದ್ದು, ವಾತಾವರಣದ ಶುದ್ಧತೆಯನ್ನು ಕಾಪಾಡುವಲ್ಲಿ ಸಹಕರಿಸುತ್ತಿದೆ ಎಂದರು. ಸೋಲಾರ್, ಹೈಡ್ರೋ ಮತ್ತು ವಿಂಡ್ ಎನರ್ಜಿಯಿಂದ 2030 ನೇ ಇಸವಿಗೆ ಭಾರತ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿ ರಾಷ್ಟ್ರವಾಗುತ್ತದೆ ಎಂದು ಅಂದಾಜಿಸಲಾಗಿದೆ ಎಂದರು. 500 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ ಕ್ಷಮತೆಯನ್ನು ಸಾಧಿಸಬಹುದು ಎಂದರು. ಈಗ 250–270 ಗಿಗಾ ವ್ಯಾಟ್ ವಿದ್ಯುತ್ ಬೇಡಿಕೆ ಇದೆ. 1695 ಬಿಲಿಯನ್ ಯುನಿಟ್ ವಿದ್ಯುತ್ ಬೇಕಾಗಿದ್ದು ಶೇ 50% ರಷ್ಟು Renewable Energy ಯಿಂದ ದೊರಕುತ್ತಿದೆ. ಇದಕ್ಕೆ ಸರಕಾರದಿಂದ ಸಹಕಾರ ದೊರೆಯುತ್ತಲಿದ್ದು, ಆ ದಿಸೆಯಲ್ಲಿ ಅಭಿವೃದ್ಧಿಯಲ್ಲಿ ವೇಗ ಪಡೆದಿದೆ ಎಂದರು. ನಾವುಗಳು ಸೋಲಾರ್ ಪ್ಯಾನ್ ಬಳಕೆ ಹೇಗೆ ಮತ್ತು ಯಾವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಬಹುದು ಎಂಬುದನ್ನ ವಿವರಿಸಿದರು. ವಿದ್ಯುತ್ ಬಳಕೆ ಬೆಳಿಗ್ಗೆ, ಹಗಲು ಮತ್ತು ರಾತ್ರೆಯ ಸಮಯದಲ್ಲಿ ಹೇಗೆ ಉಪಯೋಗ ಮಾಡಿಕೊಳ್ಳಬಹುದು, ಇದರಿಂದ ವಿದ್ಯುತ್‌ನ್ನು ಉಳಿತಾಯ ಹೇಗೆ ಮಾಡಬಹುದು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು, ತಾವುಗಳು ಮೊದಲು ಕಂಪ್ಯೂಟರ್ ವ್ಯವಹಾರವನ್ನು ಹೊಂದಿದ್ದೆ. ಈಗ Renewable Energy ಕ್ಷೇತ್ರದಲ್ಲಿ ತಮ್ಮ ವೃತ್ತಿಯನ್ನು ಬದಲಾಯಿಸಿಕೊಂಡಿರುವುದರ ಬಗ್ಗೆ ಮಾಹಿತಿ ನೀಡಿದರು. ಇದರಿಂದ ನನಗೆ ನನ್ನ ವೃತ್ತಿಯಲ್ಲಿ ತೃಪ್ತಿಯಾಗಿದೆ ಎಂದು ತಿಳಿಸುತ್ತಾ, ನಾನು ಇನ್ನು ಕೆಲವೊಂದು ಅಂಶಗಳನ್ನು ಕಲಿಯುತ್ತಿದ್ದೇನೆ. ಕಲಿಯುವಿಕೆಗೆ ವಯಸ್ಸಿನ ಯಾವುದೇ ಮಿತಿ ಇಲ್ಲವೆಂದರು.

ಅಧ್ಯಕ್ಷರಾದ ರೊ.ಆರ್.ಆನಂದ್‌ರವರು ರೊ.ಡಿ.ಎಸ್. ನಟರಾಜ್‌ರವರಿಗೆ ನೆನಪಿನ ಕಾಣಿಗೆ ನೀಡಿ ಗೌರವಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ರೊ.ಸೆಂಥಿಲ್ ವೇಲನ್ ಮತ್ತು ರೊ. ಹೆಚ್.ಎಸ್. ಮೋಹನ್‌ರವರಿಗೆ ಮತ್ತು ಆಗಮಿಸಿದ್ದ ಸರ್ವರಿಗೂ ವಂದನೆಗಳನ್ನು ತಿಳಿಸಿದರು.




**ಆಶಾಕಿರಣ ಶಿಕ್ಷಕರ ತರಬೇತಿ ಕೇಂದ್ರದ 13 ನೇ ಬ್ಯಾಚ್ ತರಬೇತಿ ಪಡೆದು ಉತ್ತಮ ಫಲಿತಾಂಶ ದಾಖಲಿಸಿ ಕೀರ್ತಿತಂದ ವಿದ್ಯಾರ್ಥಿಗಳ ಪಟ್ಟಿ ಈ ರೀತಿ ಇದೆ. ಅವರುಗಳಲ್ಲಿ ನಮ್ಮ ಮೇಲ್ಕಂಡ ಸಭೆಯಲ್ಲಿ ರ್‍ಯಾಂಕ್ ಪಡೆದವರಿಗೆ ಸನ್ಮಾನ ಮತ್ತಿತರರಿಗೆ ಮೆಡಲ್ ಪುರಸ್ಕಾರದೊಂದಿಗೆ ಅಭಿನಂದನೆ ಸಲ್ಲಿಸಲಾಯಿತು. ವಿದ್ಯಾರ್ಥಿಗಳು ಅವರು ಪಡೆದ ಶೇಕಡವಾರು ಫಲಿತಾಂಶಗಳ ವಿವರಗಳು ಈ ರೀತಿ ಇದೆ.**

## ASHAKIRANA TEACHER TRAINING INSTITUTE FOR SPECIAL EDUCATION, VIDYANAGAR, SHIVAMOGGA

### D.E.C.S.E.(I.D) REVISED-2024-25 Batch Students -EXAMINATION RESULTS

| Sl.No. | NAME | Percentage(%) | RANK PLACED |
|---|---|---|---|
| 01 | YAMUNA P | 87.33% | 1ST RANK |
| 02 | YEGAVVA NAYAK | 86.00% | 2ND RANK |
| 03 | BHAVANI R | 85.17% | 3RD RANK |
| 04 | KHOT MANISHA KUNDALIK | 84.75% | DISTINCTION |
| 05 | MADHUPALLAVI D N | 78.33% | DISTINCTION |
| 06 | MANEESHA ATWADAKAR | 83.58% | DISTINCTION |
| 07 | PATTAR PADMAJA RAMESH | 77.75% | DISTINCTION |
| 08 | SEEMA MUDALAGI | 77.25% | DISTINCTION |
| 09 | TALLURI NAGA VINUSHA | 83.83% | DISTINCTION |
| 10 | TRUPTI BIJALE | 83.75% | DISTINCTION |
| 11 | ARATI RAMACHANDRA PANDARE | 73.50% | FIRST CLASS |
| 12 | CHANDRAKALA | 70.25% | FIRST CLASS |
| 13 | LAVEENA FERNANDES | 68.92% | FIRST CLASS |
| 14 | NIRANJAN RAVINDRA HEBBAL | 67.17% | FIRST CLASS |
| 15 | PRAKASH KAMBLE | 69.25% | FIRST CLASS |
| 16 | REKHA N.G. | 70.08% | FIRST CLASS |
| 17 | SUNEELA KUMAR L.B. | 67.42% | FIRST CLASS |
| 18 | VENKATESH R | 65.75% | FIRST CLASS |

### ಸದಸ್ಯರಲ್ಲಿ ಮನವಿ

ರೋಟರಿಯಲ್ಲಿ ಜನವರಿ ತಿಂಗಳನ್ನು ವಿಶ್ವದಾದ್ಯಂತ ವೃತ್ತಿ ಸೇವಾ ಮಾಸವನ್ನಾಗಿ ಆಚರಿಸಲಾಗುತ್ತಿದೆ. ನಮ್ಮ ಕ್ಲಬ್‌ನ ವಾಡಿಕೆಯಂತೆ ಈ ತಿಂಗಳಲ್ಲಿ ಶಿವಮೊಗ್ಗೆಯ ಪರಿಣಿತ ವೃತ್ತಿಪರರನ್ನು ಅಭಿನಂದಿಸುವ ಕಾರ್ಯಕ್ರಮವಿದೆ. ಅದಕ್ಕಾಗಿ ಶಿವಮೊಗ್ಗೆಯಲ್ಲಿ ನಿಮ್ಮ ಗಮನದಲ್ಲಿರುವ ಪರಿಣಿತ ವೃತ್ತಿಪರರನ್ನು ಸನ್ಮಾನಕ್ಕೆ ಸೂಚಿಸಬೇಕಾಗಿ ಈ ಮೂಲಕ ಕೋರಲಾಗಿದೆ.

### Our Club Members

**Rtn. A. Manjunath and Rtn. Rakesh Gowda have been unanimously elected as directors for Shimoga Country club.**

**Congratulation !**



## ಸಂಪಾದಕೀಯ

### ಬಾಯಾಗುವ ಮುನ್ನ ಕಿವಿಯಾಗುವ

ನನಗೆ ನಾನೇ ಕೆಲವೊಮ್ಮೆ ಯೋಚಿಸುವುದುಂಟು. ಕೇಳಿಸುವ ಕಿವಿಗಿಂತ ಆಡುವ ಬಾಯಿಯೇ ಯಾವಾಗಲೂ ಮುಂದಾಗುವುದು ಏಕೆ? ಎಂದು.

ನಮಗೆ "ನನಗೆ ಏನೂ ಗೊತ್ತಿಲ್ಲ" ಅನ್ನುವ ಸತ್ಯವು ಕೂಡ ಗೊತ್ತಿಲ್ಲ...!! ಇದರಿಂದ ಜನಜಂಗುಳಿ, ಗುಂಪು, ಮತ್ತಿತರೆಡೆ ಮಾತಿಗೆ ನಿಲ್ಲುವ ನಾವು ಕೆಲವೊಮ್ಮೆ ಅಭಾಸಕ್ಕೊಳಗಾಗುವುದುಂಟು. ವಿಷಯ ಸಾಗರದ ಬದಿಯಲ್ಲಿ ಬೊಗಸೆ ತಿಳುವಳಿಕೆ ಹಿಡಿದುಕೊಂಡು ನನ್ನ ತಲೆಯಲ್ಲಿ ಎಲ್ಲವೂ ತುಂಬಿಕೊಂಡ ಭಾವದಲ್ಲಿ ಮಾತಿಗಿಳಿದು, ಕೊನೆಗೆ ವಿಷಯದ ಆಳ, ಅಗಲ ಅನುಭವಕ್ಕೆ ಬಂದೊಡನೆ ಮೌನಕ್ಕೆ ಮೊರೆಹೋಗುವ ಅನಿವಾರ್ಯತೆ ಎದುರಾಗುತ್ತದೆ.

ಎಲ್ಲಕ್ಕೂ ಕಿವಿಯಾಗದೆ ಬಾಯಿ ಆಗ ಬಯಸುವ ನಾವುಗಳು ವಿಷಯಾಸಕ್ತಿಗಿಂತ ವಿಷಯಾನುಭವದ ಕೊರತೆಯಲ್ಲಿ ಕೊಳೆಯುತ್ತೇವೆ. ತಿಳಿಯುವ ತಿಳುವಳಿಕೆ ವಯಸ್ಸಿನದೇನಲ್ಲ. ಅದು ಮನಸ್ಸು ಮತ್ತು ವಿವೇಕದ್ದು. ಅದು ಓದಿನದಿರಲಿ, ಅನುಭವದ್ದಿರಲಿ, ಸಾಹಿತ್ಯದ್ದಿರಲಿ, ಸಂಸ್ಕೃತಿಯದ್ದಿರಲಿ, ಪ್ರಕೃತಿಯದ್ದಿರಲಿ, ಸಂಗೀತ-ನೃತ್ಯ ಪ್ರಾಕಾರವಿರಲಿ, ಮುಖ್ಯವಾಗಿ ಮಾತು ಮತ್ತು ನಡತೆಯಿರಲಿ. ಎಲ್ಲದರಲ್ಲೂ ಕಲಿಯುವಿಕೆ ಎನ್ನುವುದು ನಿತ್ಯ ನಿರಂತರದ ಪಾಠ.

ಮಾತಾಡಿದರೆ ನಮಗೆ ತಿಳಿದಿದ್ದಷ್ಟೆ ಆಡುತ್ತೇವೆ. ಕಿವಿಯಾದರೆ ನಮಗೆ ತಿಳಿಯದ ಅದೆಷ್ಟೋ ಸಂಗತಿಗಳು ಅರಿವಿಗೆ ಬರುತ್ತದೆ. ಆದರೂ, ನಾವು ನಮ್ಮ ದಡ್ಡತನಕ್ಕೆ ಅಡ್ಡಬಿದ್ದು ವಿಷಯ ಸಂಕುಲಕ್ಕೆ ಕಿವಿಯಾಗುವ ಬದಲು ಬಾಯಾಗಿ ದಡ್ಡರಾಗುತ್ತ ಬಡಾಯಿಗಳಾಗುತ್ತಿದ್ದೇವೆಯೆ ಎಂದು ಕೆಲವೊಮ್ಮೆ ಅನ್ನಿಸದೇ ಇರದು. ಭಾಷಣವೋ, ಉಪನ್ಯಾಸವೋ, ಪ್ರವಚನವೋ ಕಿವಿಯಾಗೇ ಕೂರಬೇಕಾದ ನಾವು, ಅಲ್ಲಿ ಹತ್ತು ಹಲವು ವಿಚಾರಗಳನ್ನು ಮತ್ತು ಮಾಹಿತಿಗಳನ್ನು ನಮ್ಮ ಅರಿವಿಗೆ ಹರಿಯಬಿಡುತ್ತೇವೆ. ಆದರೆ ಗುಂಪಿನಲ್ಲಿ ಬಾಯಾಗಬಯಸುತ್ತೇವೆ...! ಅದೇಕೆ..?

**ನಿನ್ ಕಣ್ ಕಿವಿ ಮನಗಳರಿವಷ್ಟು ನಿನ್ನ ಜಗ**
**ನಿನ್ನನಳಿಸುವ ನಗಿಸುವೆಲ್ಲ ನಿನ್ನಂಶ**
**ಉನ್ನತಿಗೆ ನೀನೇರಿದಂತೆ ಜಗ ವಿಸ್ತರಿಸಿ**
**ಸಣ್ಣತನ ಸವೆಯುವುದು – ಮಂಕುತಿಮ್ಮ**

ಇದರ ಭಾವಾರ್ಥ ಹೀಗಿದೆ... ನಮಗೆ ಎಷ್ಟು 'ಗೊತ್ತು' ಅಂದರೆ ನಾವು ಎಷ್ಟು ದೂರ ನೋಡಬಹುದೋ ಅಥವಾ ಎಷ್ಟು ದೂರದ ಶಬ್ದ ಕೇಳಬಹುದೋ ಅಥವಾ ನಮ್ಮ ಮನಸ್ಸು ಎಷ್ಟು ದೂರ ತೀಕ್ಷ್ಣವಾಗಿ ಯೋಚಿಸಬಲ್ಲದೋ ಅಷ್ಟು ನಮ್ಮ ಅರಿವಿಗೆ, ನಮ್ಮ ಕಾಣುವ, ಕೇಳುವ ಮತ್ತು ಯೋಚಿಸುವ ಕ್ಷಮತೆಯ ಮಿತಿಯುಂಟು. ನಮ್ಮ ಅನುಭವಕ್ಕೆ ಬರುವುದೆಲ್ಲವೂ ನಮ್ಮ ನೋಟದ ಕೇಳಿಕೆಯ ಮತ್ತು ಆಲೋಚನೆಯ ಪರಿಧಿಯಲ್ಲೇ ಇರುತ್ತದೆ. ಅಷ್ಟೇ ನಮ್ಮ ಪ್ರಪಂಚ. ನಮ್ಮ ನೋವು ನಲಿವುಗಳೆಲ್ಲವೂ ಆ ಅನುಭವಗಳಿಂದಲೇ ಆಗುತ್ತದೆ.

'ಉನ್ನತಿಗೆ ನೀನೇರಿದಂತೆ ಜಗ ವಿಸ್ತರಿಸಿ ಸಣ್ಣತನ ಸವೆಯುವುದು' ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ, ನಾವು ಬೆಳೆದರೆ ನಮ್ಮ ಜಗತ್ತೂ ಬೆಳೆದು ವಿಸ್ತಾರವಾಗುತ್ತದೆ. ಆ ದಿಕ್ಕಿನಲ್ಲಿ ನಮ್ಮ ಪ್ರಯಾಣಕ್ಕೆ ನಮ್ಮ ಪೂರ್ವಜರು ಬಹಳ ಒಳ್ಳೆಯ ಮಾರ್ಗಗಳನ್ನು ಸೂಚಿಸಿದ್ದಾರೆ. ಅದಕ್ಕೇ ಇರಬೇಕು ಹಿರಿಯರು 'ಮಾತು ಬೆಳ್ಳಿ, ಮೌನ ಬಂಗಾರ' ಎಂದು ಹೇಳಿದ್ದಾರೆ.

ಹೀಗಾಗಿ ನಾವು ಬಾಯಾಗುವುದಕ್ಕಿಂತ ಮೌನದಲ್ಲಿ ಕೆಲ ಸಂಗತಿಗಳಿಗೆ ಕಿವಿಯಾದರೆ ಅಧ್ಯಯನ ಶೀಲತೆಯ ಜೊತೆಗೆ ಜ್ಞಾನಾರ್ಜನೆಯ ದಾರಿಯೂ ಉದ್ದವಾದೀತೇನೋ...

ಎಲ್ಲರಿಗೂ ಹೀಗನಿಸಬೇಕೆಂದೇನೂ ಇಲ್ಲ...! ಏನಂತೀರಿ...?

**• ರೊ. ಎಂ. ಮಾಧವಾಚಾರ್**






### ಮುದ್ದುರಾಮನ ಚೌಪದಿ...

**ಹಾರಾಡುತಿರಲಿ ಬಿಡು ಜೀವನದ ಗಾಳಿಪಟ**
**ಏರುವುದು ಗಾಳಿ ಜೊತೆದಾರವಿದ್ದಷ್ಟು**
**ಎಂದೋ ಆ ದಾರವನು ಕಡಿಯುವನು ಜವರಾಯ**
**ಇಂದೇಕೆ ಉದ್ವೇಗ – ಮುದ್ದುರಾಮ**

### *Happy Birthday Wishes*



*Viswendra B. N.*
*08th Jan*





*Rama Gopal*
*11th Jan*

To,

*Book Post*